ರಾಜ್ಯದಲ್ಲಿರುವ ವಸತಿ ಹೀನರು

೯೩೫. ಶ್ರೀ ಅಜ್ಜೀಬಾಳ ಜಿ. ಎಸ್ ಹೆಗಡೆ (ಅಂಕೋಲಾ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವಸತಿ ಹೀನರ ಸಂಖ್ಯೆ ಎಷ್ಟು ?

ಆ) ಹಿಂದಿನ ೩-೪ ವರ್ಷಗಳಿಗೆ ಹೋಲಿಸಿದಾಗ ಇವರ ಸಂಖ್ಯೆ ಹೆಚ್ಚಾಗಿದೆಯೇ, ಅಥವಾ ಕಡಿಮೆ ಹಾಗಿದೆಯೇ ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್(ವಸತಿ ರಾಜ್ಯ ಸಚಿವರು).—

ಅ) ರಾಜ್ಯದಲ್ಲಿ ೧೫,೬೨,೦೦೦ ವಸತಿ ಹೀನರನ್ನು ಗುರ್ತಿಸಲಾಗಿದೆ.

ಆ) ಹಿಂದಿನ ೩-೪ ವರ್ಷಗಳಿಗೆ ಹೋಲಿಸಿದಾಗ ವಸತಿ ಹೀನರ ಸಂಖ್ಯೆ ಹೆಚ್ಚಾಗಿದೆ.

ರಾಜ್ಯದ ಜೀತದಾಳುಗಳಿಗೆ ವಸತಿ ಸೌಲಭ್ಯದ ಬಗ್ಗೆ

೫೪೬. ಶ್ರೀ ರಾಜುಗೌಡ (ಹನೂರು).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಬಕ್ಕ್ ವಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಗುರ್ತಿಸಿರುವ ಜೀತದಾಳುಗಳು ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಜನಗಳಿದ್ದಾರೆ ?

ಆ) ಇವರುಗಳ ಪುನರ್ ವಸತಿಗಾಗಿ ಸರ್ಕಾರದವರು ಕೈಕೊಂಡಿರುವ ಕಾರ್ಯಕ್ರಮಗಳೇನು ?

ಇ) ಇವರ ಪುನರ್ ವಸತಿಗಾಗಿ ಸಾಮೂಹಿಕವಾಗಿ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಈ) ಸರ್ಕಾರದ ಸಹಾಯ ದೊರೆಯದೆ ಪುನಃ ಜೀತ ಕೆಲಸಕ್ಕೆ ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಜಿಲ್ಲಾವಾರು ಗುರುತಿಸಿರುವ ಜೀತದಾಳುಗಳಪಟ್ಟಿಯನ್ನು ಲಗತ್ತಿಸಿದೆ.

ಆ) ೧) ಜೀತದಾಳುಗಳ ಪುನರ್ ವಸತಿಗಾಗಿ ಎಮ್ಮೆ, ಹಸು, ಕುರಿ ಒದಗಿಸುವುದರ ಮೂಲಕ ಮತ್ತು ಸಣ್ಣ ವ್ಯಾಪಾರ, ಗೃಹ ಕೈಗಾರಿಕೆ ನಡೆಸಲು (ತಲಾ) ರೂ.೬೨೫೦-೦೦ ಸಹಾಯ ಧನದ ಮೂಲಕ ಸೌಲಭ್ಯಗಳನ್ನು ನೀಡಲಾಗುತ್ತಿದೆ.

೨) ಸಾಧ್ಯವಾದ ಕಡೆಗಳಲ್ಲಿ ಸರ್ಕಾರಿ ಜಮೀನನ್ನು ಮಂಜೂರು ಮಾಡಿರುತ್ತೆ.

೩) ಜನತಾ ವಸತಿ ಯೋಜನೆಯಿಂದ ಮನೆಗಳನ್ನು ಕಟ್ಟಿಸಿಕೊಡಲಾಗಿದೆ.

ಇ) ನೀರಾವರಿ ಸೌಲಭ್ಯ ಇರುವ ಕಡೆ ಸಾಮೂಹಿಕ ನೀರಾವರಿ ಯೋಜನೆ ಮತ್ತು ಜೀತ ವಿಮುಕ್ತರ ಎಸ್ಟೇಟನ್ನು ಸ್ಥಾಪಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ಈ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ತಃಖ್ತೆ—೧

ರಾಜ್ಯದಲ್ಲಿ ೧೯೭೫–೭೬ರಲ್ಲಿ ಗುರ್ತಿಸಿರುವ ಜೀತದಾಳುಗಳ ಜಿಲ್ಲಾವಾರು ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಗುರ್ತಿಸಿರುವ ಜೀತದಾಳುಗಳು
೧	ಬಳ್ಳಾರಿ	೬೬೨
೨	ಬೆಳಗಾಂ	೧೯
೩	ಉತ್ತರ ಕನ್ನಡ	೮
೪	ಚಿತ್ರದುರ್ಗ	೧,೨೫೨
೫	ತುಮಕೂರು	೨,೦೪೧
೬	ರಾಯಚೂರು	೧೨೩
೭	ಚಿಕ್ಕಮಗಳೂರು	೨,೭೫೬
೮	ಬೀದರ್	೧೨
೯	ಹಾಸನ	೪,೮೧೯
೧೦	ಕೊಡಗು	೫೯
೧೧	ಧಾರವಾಡ	೧
೧೨	ಗುಲ್ಬರ್ಗ	೬೫
೧೩	ಮಂಡ್ಯ	೫,೨೪೩
೧೪	ಕೋಲಾರ	೨,೮೯೬
೧೫	ಬೆಂಗಳೂರು	೮,೮೭೧
೧೬	ಬಿಜಾಪುರ	೩೫೨
೧೭	ದಕ್ಷಿಣ ಕನ್ನಡ	೩೮೪
೧೮	ಮೈಸೂರು	೨೪,೩೩೫
೧೯	ಶಿವಮೊಗ್ಗ	೮,೭೯೧
	ಒಟ್ಟು	೬೨,೬೮೯

೬೨,೬೮೯ ಜನರನ್ನು ಗುರ್ತಿಸಲಾಗಿದ್ದರೂ ಕೂಡ, ೫೫೨೦ ಜನರು ಅನರ್ಹರೆಂದು ಕಂಡು ಬಂದು ಕೈಬಿಡಲಾಗಿದೆ. ಇನ್ನು ಉಳಿದ ೫೭,೧೬೮ ಜನರಲ್ಲಿ, ಇದುವರೆಗೂ ೩೮,೫೨೭ ಜನರಿಗೆ ಪುನರ್ ವಸತಿ ಕಲ್ಪಿಸಲಾಗಿದೆ. ಇನ್ನು ಉಳಿದ ೧೮,೬೪೨ ಜನರಿಗೆ ಪುನರ್ ವಸತಿ ಕಲ್ಪಿಸ ಬೇಕಾಗಿರುತ್ತೆ.

ಕೆಮ್ಮಣ್ಣು ಗುಂಡಿಯಂನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಪರಿವರ್ತಿಸುವುದು

೮೬೫. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ಪ್ರವಾಸೋದ್ಯಮ ಕೇಂದ್ರಗಳಿವೆ ?

ಆ) ಕೆಮ್ಮಣ್ಣು ಗುಂಡಿಯಂನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಪರಿವರ್ತಿಸಲಾಗುವುದೆ ?

ಇ) ತರೀಕೆರೆ ತಾಲ್ಲೂಕ್ ಅಮೃತೇಶ್ವರ ದೇವಾಲಯವು ಪ್ರಾಚೀನ ದೇವಾಲಯವಾಗಿದ್ದು ಇದನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಲಾಗುವುದೆ ?